# ನವೀನ್ ಮನೆಗೆ ಮುರುಘಾ ಶರಣರ ಭೇಟಿ

ಚಿತ್ರದುರ್ಗ ಮಾ. 5 - ಯುದ್ಧಪೀಡಿತ ಉಕ್ರೇನ್‌ನಲ್ಲಿ ರಷ್ಯಾ ಶೆಲ್ ದಾಳಿಯಿಂದ ಸಾವನ್ನಪ್ಪಿದ ನವೀನ್ ಅವರ ಚಳಗೇರಿಯ ಮನೆಗೆ ಡಾ. ಶಿವಮೂರ್ತಿ ಮುರುಘಾ ಶರಣರು ತೆರಳಿ ಅವರ ತಂದೆ ತಾಯಿ ಮತ್ತು ಕುಟುಂಬವರ್ಗದವರಿಗೆ ಸಾಂತ್ವನ ಹೇಳಿದರಲ್ಲದೆ, 25 ಸಾವಿರ ರೂ.ಗಳ ನೆರವು ನೀಡಿದರು. ಈ ಸಂದರ್ಭದಲ್ಲಿ ಹಾವೇರಿ ಹೊಸಮಠದ ಶ್ರೀ ಬಸವಶಾಂತಲಿಂಗ ಸ್ವಾಮಿಗಳು ಮತ್ತು ರಾಣೇಬೆನ್ನೂರು ವಿರಕ್ತಮಠದ ಶ್ರೀ ಗುರುಬಸವ ಸ್ವಾಮಿಗಳು ಇದ್ದರು.





